**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ. ಎಡಿಎಂ2(2)ಪ್ರಾ.ಶಿ ಸಿ.ಪಿ.ಆರ್.ಇ 100/2010-11 ದಿನಾಂಕ: 06-09-2011

# ಸುತ್ತೋಲೆ

ವಿಷಯ: 2011ನೇ ಸಾಲಿನ ಇಂಧನ ಸಂರಕ್ಷಣಾ ರಾಷ್ಟ್ರೀಯ ಜಾಗೃತಿ ಅಂದೋಲನ- 4,5 ಮತ್ತು 6ನೇ ತರಗತಿ ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆ ನಡೆಸುವ ಬಗ್ಗೆ.

ಉಲ್ಲೇಖ: ದಿನಾಂಕ 25-08-2011ರಂದು ಬ್ಯೂರೋ ಆಫ್ ಎನರ್ಜಿ ಎಫಿಶಿಯೆನ್ಸಿ ಮಿನಿಸ್ಟ್ರಿ ಆಫ್ ಪವರ್, ಸೇವಾ ಭವನ್, 4ನೇ ಮಹಡಿ, ಆರ್.ಕೆ.ಪುರಂ, ನವದೆಹಲಿ ಇವರ ಪರವಾಗಿ ಶ್ರೀ ವಿ.ವಿ.ಪಟ್ಟಣಶೆಟ್ಟಿ, ಜಂಟಿ ನಿರ್ದೇಶಕರು, ಸಿ.ಪಿ.ಆರ್.ಐ ಬೆಂಗಳೂರು ಇವರ ಪತ್ರ

***********

ಉಲ್ಲೇಖಿತ ಪತ್ರದಲ್ಲಿ 2011ನೇ ಸಾಲಿನಲ್ಲಿ ಇಂಧನ ಸಂರಕ್ಷಣೆಯ ಬಗ್ಗೆ ರಾಜ್ಯಾದ್ಯಂತ ಚಿತ್ರಕಲೆ ಸ್ಪರ್ಧೆಯನ್ನು 4, 5 ಮತ್ತು 6ನೇ ತರಗತಿ ಮಕ್ಕಳಿಗೆ ಏರ್ಪಡಿಸಬೇಕೆಂದು ಇವರು ಕೋರಿರುತ್ತಾರೆ. ಈ ಚಿತ್ರಕಲಾ ಸ್ಪರ್ಧೆಯನ್ನು ನಡೆಸುವುದರಿಂದ ಮಕ್ಕಳಲ್ಲಿ ಸೃಜನಾತ್ಮಕತೆ ಹೆಚ್ಚಿಸುವುದರ ಜೊತೆಗೆ ಪೋಷಕರು ಮತ್ತು ಶಿಕ್ಷಕರಲ್ಲಿ ಇಂಧನ ಸಂರಕ್ಷಣೆಯ ಬಗ್ಗೆ ಅರಿವು ಮೂಡಿಸಿದಂತಾಗುತ್ತದೆ. ಸದರಿ ಚಿತ್ರಕಲಾ ಸ್ಪರ್ಧೆಗಳನ್ನು ಪ್ರತಿ ಶಾಲಾ ಮಟ್ಟದಲ್ಲಿ ದಿ:02-10-2011 ಗಾಂಧಿ ಜಯಂತಿಯ ದಿನ ಅಥವಾ ಅದಕ್ಕೆ ಮುಂಚೆ ನಡೆಸಿ, ದಿನಾಂಕ: 10-10-11 ರೊಳಗೆ ಪ್ರತಿ ಶಾಲೆಯಿಂದ 2 ಉತ್ತಮ ಚಿತ್ರಕಲಾ ಕೃತಿಗಳನ್ನು, ಅವರ ಹೆಸರು ಮತ್ತು ಇತರ ವಿವರಗಳೊಂದಿಗೆ ಈ ಕೆಳಕಾಣಿಸಿದ ನೋಡಲ್ ಅಧಿಕಾರಿಗಳ ವಿಳಾಸಕ್ಕೆ ನೇರವಾಗಿ ಸುರುಳಿ [ರೋಲ್ ಮಾಡಿ] ಆಕಾರದಲ್ಲಿ ಕಳುಹಿಸಿಕೊಡಲು ತಿಳಿಸಿದೆ. ನೋಡಲ್ ಅಧಿಕಾರಿಗಳ ವಿಳಾಸ ಈ ಕೆಳಗಿನಂತಿದೆ.

ಶ್ರೀ ವಿ.ವಿ.ಪಟ್ಟಣಶೆಟ್ಟಿ, ಜಂಟಿ ನಿರ್ದೇಶಕರು,
ಡೈಎಲೆಕ್ಟ್ರಿಕ್ ಮಟೇರಿಯಲ್ಸ್ ಡಿವಿಷನ್(ಡಿಎಂಡಿ)
ಸೆಂಟ್ರಲ್ ಪವರ್ ರಿಸರ್ಚ್ ಇನ್‌ಸ್ಟಿಟ್ಯೂಟ್,
ನ್ಯೂ ಬಿಇಎಲ್ ರಸ್ತೆ, ಸದಾಶಿವನಗರ, ಪಿಬಿ ಸಂಖ್ಯೆ: 8066 ಬೆಂಗಳೂರು-560080.
ದೂರವಾಣಿ ಸಂಖ್ಯೆ ಕಛೇರಿ, 080-23604448 ಮೊಬೈಲ್: 9449836878 ಫ್ಯಾಕ್ಸ್-080-23601213, 23602277

ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಈ ಬಗ್ಗೆ ಸುತ್ತೋಲೆ ಹೊರಡಿಸಿ, ಪ್ರತಿ ಶಾಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಭಾಗವಹಿಸುವಂತೆ ಶಾಲಾ ಮುಖ್ಯಸ್ಥರಿಗೆ ತಿಳುವಳಿಕೆ ನೀಡಲು ತಿಳಿಸಿದೆ.

ಶಾಲಾ ಮಟ್ಟದಲ್ಲಿ ಚಿತ್ರಕಲಾ ಸ್ಪರ್ಧೆ ಏರ್ಪಡಿಸಲು ಶಾಲಾ ಶಿಕ್ಷಕರು ಹಾಗೂ ಪ್ರಾಥಮಿಕ ಹಾಗೂ ಪ್ರೌಢಶಾಲಾ ಚಿತ್ರಕಲಾ ಶಿಕ್ಷಕರ ಸೇವೆಯನ್ನು ಬಳಸಿಕೊಳ್ಳಲು ತಿಳಿಸಿದೆ.

ಈ ಚಿತ್ರಕಲಾ ಸ್ಪರ್ಧೆಗೆ ಕೆಳಕಂಡ 3 ಅಂಶಗಳಲ್ಲಿ ಒಂದನ್ನು ವಿದ್ಯಾರ್ಥಿಗಳು ಆಯ್ಕೆ ಮಾಡಿಕೊಳ್ಳಬಹುದು

| | | |
|---|---|---|
| 1 | ವಿದ್ಯುತ್ ಕಡಿತ ಹೋಗಲಾಡಿಸುವುದಕ್ಕಾಗಿ ವಿದ್ಯುತಶಕ್ತಿ ಉಳಿತಾಯ ಮಾಡಿ | Save Electricity to avoid power cuts |
| 2 | ಇಂಧನಗಳನ್ನು ಜಾಗರೂಕತೆಯಿಂದ ಬಳಸಿರಿ | Save Energy with Care |
| 3 | ನೀವು ಕಡಿಮೆ ಉರಿಸಿದಲ್ಲಿ ಹೆಚ್ಚು ಉಳಿಸುತ್ತೀರಿ | The less you burn,The more you earn |

ಪ್ರತಿ ಚಿತ್ರಕಲಾ ಕೃತಿ ಹಿಂಭಾಗ ವಿದ್ಯಾರ್ಥಿ ಹೆಸರು, ತಂದೆ ಹೆಸರು,, ಸಂಪರ್ಕಿಸ ಬೇಕಾದ ಟೆಲಿಫೋಣ್ ಸಂಖ್ಯೆ: ಓದುತ್ತಿರುವ ಶಾಲೆಯ ಹೆಸರು/ಮೊಹರು, ತರಗತಿ, ತಾಲ್ಲೂಕು, ಪಿನ್ ಕೋಡ್ ಸಮೇತ ಪೂರ್ಣ

ವಿಳಾಸವನ್ನು [ಹಿಂದಿ ಅಥವಾ ಇಂಗ್ಲೀಷ್‌ನಲ್ಲಿ] ಬರೆಯಬೇಕು **[ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲಾ ಮಕ್ಕಳಿಗೆ ಪ್ರಮಾಣ ಪತ್ರ ನೀಡಲಾಗುವುದರಿಂದ]** ಪ್ರತಿ ಶಾಲೆಯಿಂದ ಸ್ಪರ್ಧೆಯಲ್ಲಿ ಭಾಗವಹಿಸಿದ ಮಕ್ಕಳ ಸಂಖ್ಯೆಯನ್ನು ತಪ್ಪದೇ ನಮೂದಿಸಿ ಕಳುಹಿಸಬೇಕು

ಶಾಲಾ ಮಟ್ಟದಿಂದ ಬಂದ ಚಿತ್ರಕಲಾಕೃತಿಗಳಲ್ಲಿ ತಜ್ಞರ ಸಮಿತಿಯು 50 ಚಿತ್ರಕಲಾಕೃತಿಗಳನ್ನು ಆಯ್ಕೆ ಮಾಡುತ್ತದೆ. ದಿ: 14-11-2011 ರಂದು ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು ಬೆಂಗಳೂರಿನ ಮೇಲ್ಕಾಣಿಸಿದ ನೋಡಲ್ ಅಧಿಕಾರಿಗಳ ಕಛೇರಿ ಆವರಣದಲ್ಲಿ ನಡೆಸಲಾಗುವುದು. ರಾಜ್ಯ ಮಟ್ಟದಲ್ಲಿ ಆಯ್ಕೆಯಾದ ಚಿತ್ರಕಲಾ ಕೃತಿಗಳಿಗೆ ಬಹುಮಾನದ ವಿವರ ಈ ಕೆಳಕಂಡಂತಿದೆ ಸದರಿ ಬಹುಮಾನವನ್ನು ಕೇಂದ್ರ ಸರ್ಕಾರದ ವತಿಯಿಂದ ದಿ: 14-11-2011 ರಂದು ನೀಡಲಾಗುವುದು.

| ಕ್ರ.ಸಂ. | ಬಹುಮಾನದ ವಿವರ | ಸಂಖ್ಯೆ | ಮೊತ್ತ ರೂ.ಗಳಲ್ಲಿ |
|---|---|---|---|
| 1. | ಮೊದಲನೇ ಬಹುಮಾನ | 1 | 10,000-00 |
| 2. | ಎರಡನೇ ಬಹುಮಾನ | 1 | 8,000-00 |
| 3. | ಮೂರನೇ ಬಹುಮಾನ | 1 | 5,000-00 |
| 4. | ಸಮಾಧಾನಕರ ಬಹುಮಾನ | 10 | 1,000-00 |

ರಾಜ್ಯ ಮಟ್ಟದಲ್ಲಿ ಆಯ್ಕೆಯಾದ 3 ಅಭ್ಯರ್ಥಿಗಳನ್ನು ತಲಾ ಒಬ್ಬರು ಪೋಷಕರೊಂದಿಗೆ ದಿ: 12-12-2011 ರಂದು ದೆಹಲಿಯಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ಸ್ಪರ್ಧೆಗೆ ಕಳುಹಿಸಿಕೊಡಲಾಗುವುದು. ರಾಷ್ಟ್ರ ಮಟ್ಟದ ಬಹುಮಾನಗಳು ಹೀಗಿವೆ.

| ಕ್ರ.ಸಂ. | ಬಹುಮಾನದ ವಿವರ | ಸಂಖ್ಯೆ | ಮೊತ್ತ ರೂ.ಗಳಲ್ಲಿ |
|---|---|---|---|
| 1. | ಮೊದಲನೇ ಬಹುಮಾನ | 1 | 1,00,000-00 |
| 2. | ಎರಡನೇ ಬಹುಮಾನ | 4 | 50,000-00 |
| 3. | ಮೂರನೇ ಬಹುಮಾನ | 8 | 25,000-00 |
| 4. | ಸಮಾಧಾನಕರ ಬಹುಮಾನ | 10 | 10,000-00 |

ಸೂಚನೆಗಳು:-

1. ಸ್ಪರ್ಧೆಯ ಅವಧಿ 2 ಗಂಟೆ
2. ತೀರ್ಪುಗಾರರ ತೀರ್ಪು ಅಂತಿಮವಾಗಿರುತ್ತದೆ. ಯಾವುದೇ ಚರ್ಚೆಗೆ ಅವಕಾಶವಿರುವುದಿಲ್ಲ.
3. ಕಲಾಕೃತಿಗಳು 15X22'' ಗಾತ್ರದ ಡ್ರಾಯಿಂಗ್ ಅಥವಾ ಎ4 ಹಾಳೆಯಲ್ಲಿರಬೇಕು ವಿದ್ಯಾರ್ಥಿಯು ಜಲವರ್ಣ, ಕ್ರಿಯಾನ್ಸ್, ಪೇಸ್ಟಲ್, ಪೆನ್ಸಿಲ್ ಇತ್ಯಾದಿಗಳನ್ನು ಉಪಯೋಗಿಸಬಹುದು. ಹೊರ ರೇಖೆ ಹಾಕಲು ಮಾತ್ರ ಸ್ಕೆಚ್‌ಪೆನ್ ಬಳಸಬಹುದು.
4. ಅಪೂರ್ಣವಾದ, ವಿಳಾಸವಿಲ್ಲದ, ಕ್ಷೇತ್ರ ಶಿಕ್ಷಣಾಧಿಕಾರಿ ಕಳಿಸುವ ಪಟ್ಟಿಯಲ್ಲಿ ಹೆಸರು ಇಲ್ಲದ ಚಿತ್ರಕಲಾ ಕೃತಿಗಳನ್ನು ನಿರಾಕರಿಸಲಾಗುವುದು. ಹಾಗೂ ಆಯ್ಕೆಯಾದ ಚಿತ್ರಕಲಾಕೃತಿಗಳು ಕ್ಷೇತ್ರ ಶಿಕ್ಷಣಾಧಿಕಾರಿಯವರಿಗೆ ಸೇರಿದ್ದು, ಅವುಗಳನ್ನು ಅವರು ಯಾವುದೇ ರೀತಿಯಲ್ಲಿ ಬಳಸಿಕೊಳ್ಳಬಹುದಾಗಿದೆ.
5. ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸುವ 50 ವಿದ್ಯಾರ್ಥಿಗಳಿಗೆ ತಲಾ ರೂ.1000/-ಗಳು ನೀಡುವುದರ ಜೊತೆಗೆ ಇಬ್ಬರು ಪೋಷಕರಿಗೆ ಬಂದು ಹೋಗುವ ರೈಲು / ಬಸ್ ಚಾರ್ಜು ನೀಡಲಾಗುವುದು.

ಶಾಲೆ/ರಾಜ್ಯ/ರಾಷ್ಟ್ರ ಮಟ್ಟದ ಚಿತ್ರಕಲಾ ಸ್ಪರ್ಧೆಗಳನ್ನು ನಡೆಸಬೇಕಾದ ದಿನಾಂಕ ಮತ್ತು ವಿವರ

| ಕ್ರ. ಸಂ. | ಚಟುವಟಿಕೆ | ನಿರ್ವಹಣೆ | ದಿನಾಂಕ |
|---|---|---|---|
| 1. | ಶಾಲಾ ಮಟ್ಟದ ಚಿತ್ರಕಲಾ ಸ್ಪರ್ಧೆ | ಶಾಲಾ ಮುಖ್ಯ ಶಿಕ್ಷಕರು, ಚಿತ್ರಕಲಾ ಶಿಕ್ಷಕರು | 02-10-2011 ಅಥವಾ ಅದಕ್ಕೂ ಮುಂಚೆ |
| 2. | 2 ಅತ್ಯುತ್ತಮ ಚಿತ್ರಗಳ ಆಯ್ಕೆಯ ಪಟ್ಟಿಯನ್ನು ಸ್ವೀಕರಿಸುವುದು + ಭಾಗವಹಿಸಿದ ಮಕ್ಕಳ ಸಂಖ್ಯೆಯ ವಿವರದೊಂದಿಗೆ | ಶಾಲಾ ಮುಖ್ಯಸ್ಥರು ನೋಡಲ್ ಅಧಿಕಾರಿಗಳಿಗೆ ಕಲಾಕೃತಿ ತಲುಪಿಸುವ ದಿನಾಂಕ | 10-10-2011 |
| 3. | ರಾಜ್ಯ ಮಟ್ಟಕ್ಕೆ 50 ವಿದ್ಯಾರ್ಥಿಗಳ ಆಯ್ಕೆಯ ದಿನಾಂಕ | | 21-10-2011 |
| 4. | ರಾಜ್ಯ ಮಟ್ಟದ ಸ್ಪರ್ಧೆ, ರಾಷ್ಟ್ರ ಮಟ್ಟಕ್ಕೆ ಆಯ್ಕೆ ಹಾಗೂ ರಾಜ್ಯ ಪ್ರಶಸ್ತಿ ನೀಡುವ ದಿನ | | 14-11-2011 |
| 5. | ರಾಷ್ಟ್ರ ಮಟ್ಟದ ಸ್ಪರ್ಧೆ, ಎನ್‌ಟಿಪಿಸಿ ನಯಡ್, ದೆಹಲಿ. | | 12-12-2011 |
| 6. | ರಾಷ್ಟ್ರ ಮಟ್ಟದ ಬಹುಮಾನ ವಿತರಣೆ, ವಿದ್ಯುಚ್ಛಕ್ತಿ ಸಚಿವಾಲಯ, ದೆಹಲಿ | | 14-12-2011 |

ಅಗತ್ಯವೆನಿಸಿದಲ್ಲಿ ಈ ಕೆಳಕಾಣಿಸಿದ ಅಧಿಕಾರಿಗಳು ಮತ್ತು ಚಿತ್ರಕಲಾ ಶಿಕ್ಷಕರನ್ನು ಸಂಪರ್ಕಿಸಿ ಮಾರ್ಗದರ್ಶನ ಪಡೆಯಬಹುದು.


**ಶ್ರೀ.ಪಾಲಾಕ್ಷಯ್ಯ**
ಉಪನಿರ್ದೇಶಕರು[ಪ್ರಾಥಮಿಕ ಶಿಕ್ಷಣ]
ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು [ಮೊಬೈಲ್ ಸಂಖ್ಯೆ. 9449630208]

**ಜಿ.ಕೆ.ಶಿವಣ್ಣ**
ಚಿತ್ರಕಲಾ ಶಿಕ್ಷಕರು, ಶಿಕ್ಷಣ ವಾರ್ತೆ ವಿಭಾಗ,
ಸಾ.ಶಿ.ಇಲಾಖೆ ಆಯುಕ್ತರ ಕಛೇರಿ, ಬೆಂಗಳೂರು
[ಮೊಬೈಲ್ ಸಂಖ್ಯೆ. 9964952586]


ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)

ಇವರಿಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ, ರವರಿಗೆ ಅಗತ್ಯ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ರವರಿಗೆ ತುರ್ತು ಕ್ರಮಕ್ಕಾಗಿ

ಪ್ರತಿಯನ್ನು
ಶ್ರೀ ವಿ.ವಿ.ಪಟ್ಟಣಶೆಟ್ಟಿ, ಜಂಟಿ ನಿರ್ದೇಶಕರು, ಡೈಎಲೆಕ್ಟ್ರಿಕ್ ಮಟೀರಿಯಲ್ಸ್ ಡಿವಿಷನ್(ಡಿಎಂಡಿ)ಸೆಂಟ್ರಲ್ ಪವರ್ ರಿಸರ್ಚ್ ಇನ್ ಟಿಟ್ಯೂಟ್, ನ್ಯೂ ಬಿಇಎಲ್ ರಸ್ತೆ, ಸದಾಶಿವನಗರ, ಪಿಬಿ ಸಂಖ್ಯೆ: 8066 ಬೆಂಗಳೂರು-560080. ಇವರಿಗೆ ಮಾಹಿತಿಗಾಗಿ. ಮೊಬೈಲ್ ಸಂಖ್ಯೆ: 9449836878.